cheapest Daily
1 ಕಾಸು
ತಿಂಗಳಿಗೆ ವಾರಪತ್ರಿಕೆ ಸೇರಿ 4 ಆಣೆ

Regd. No. M 1299 SATYAVADI

ಸತ್ಯವಾದಿ

ಸಂಪುಟ 26] ಸೋಮವಾರ 28—12—1942 [ಸಂಚಿಕೆ 82

ಉತ್ತಮ ಕಾಫೀ
ಸುವಾಸನೆ! ಅತ್ಯಂತ ರುಚಿ!
ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.
ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!
ಕೊಳ್ಳೇಗಾಲ

ಹಿಟ್ಲರಿನ ಗತಿ ಏನಾಗುವುದು?

ಯುದ್ಧವಾರ್ತೆ

ನ್ಯೂಗಿನಿಯಲ್ಲಿ ಹೊಡೆದಾಟ ಹೆಚ್ಚಾಗಿದೆ. ಬುನಾ ಭಾಗದಲ್ಲಿ ಮಿತ್ರ ಮಂಡಲಿಯ ಒತ್ತಾಯ ಬಹಳವಾಗಿದೆ. ಹನ್ನೊಂದು ಜಪಾನ್ ವಿಮಾನಗಳು ಹೊಡೆದುರುಳಿಸಲಾಗಿದೆ.

ಡಾರ್ ಭಾಗದಲ್ಲಿ ರಷ್ಯನರು ಮುಂದುವರಿಯುತ್ತಿದ್ದಾರೆ. ಮುಖ್ಯ ರೈಲ್ವೆ ಸ್ಟೇಷನ್ನುಗಳನ್ನೆಲ್ಲಾ ಹಿಡಿದಿರುತ್ತಾರೆ ನಾಜಿ ಸೈನ್ಯವು ಹಿಂದಕ್ಕೆ ದಬ್ಬಲ್ಪಡುತ್ತಿದೆ.

ಮಿತ್ರಮಂಡಲಿಯ ಸೈನ್ಯವು ಟ್ಯೂನಿಸ್ಸಿಗೆ ೧೨ ಮೈಲಿಯ ಹತ್ತಿರ ಬಂದಿರುವುದು.

ಸ್ಟಾಲಿನ್‌ಗ್ರಾಡಿನಲ್ಲೂ ರಷ್ಯನರ ಒತ್ತಾಯವೇ ಹೆಚ್ಚಾಗಿದೆ.

ಆರ್. ಎ. ಎಫ್. ನವರು ಬರ್ಮಾದಲ್ಲಿ ಜಪಾನ್ ವಿಮಾನ ನಿಲ್ದಾಣವನ್ನು ಮುತ್ತಿದ್ದಾರೆ.

"ನಿಜವಾದ ಯುದ್ಧ ಈಗತಾನೇ ಪ್ರಾರಂಭವಾಗಿದೆ" ಎಂದು ಜಪಾನ್ ಮುಖ್ಯ ಮಂತ್ರಿಯು ಟೋಕಿಯೋದಲ್ಲಿ ಹೇಳಿರುವನು.

ಉತ್ತರ ಆಫ್ರಿಕಾದಲ್ಲಿ ಡಾರ್ಲಿನ್ನರ ಸ್ಥಾನಕ್ಕೆ ಗಿರೋಡರು ನಿಯಮಿಸಲ್ಪಟ್ಟಿದ್ದಾರೆ.

ಅಮೇರಿಕಾದಲ್ಲಿ ಈ ವರ್ಷ 12000 ಹಡಗುಗಳು ರಿಪೇರಿ ಮಾಡಲ್ಪಟ್ಟಿವೆ.

ತಾಜಾ ಸಮಾಚಾರ

ಹಿಟ್ಲರಿನ ಅಧಃಪತನವನ್ನು ಕುರಿತು ಡಗ್ಲಾಸನು ಒಂದು ಚಿಕ್ಕ ನಾಟಕ ಬರೆದಿರುವನು. ಆತನು ಸುತ್ತ ಕಾವಲು ಚೆನ್ನಾಗಿರುವುದರಿಂದ ಕೊಲ್ಲಲ್ಪಡಲಾರನೆಂದಿರುವನು, ರಣರಂಗದಲ್ಲಿ ಸಾಯಲಾರನೆಂದೂ ವಿಚಾರಣೆ ಮತ್ತು ಶಿಕ್ಷೆಗೆ ಒಪ್ಪಿಸಲ್ಪಡಲಾರನೆಂದೂ ಹೇಳಿರುವನು. ಕಡೆಗೆ ಮುಂದೆ ವೇಷಧಾರಿಯಾಗಿ ಎಲ್ಲೋ ಮಾಯವಾಗಿದ್ದು ಕೊಂಡು ಜೀವನ ಮಾಡುವನೆಂದು ಊಹಿಸಲಾಗಿದೆ.

ನ್ಯೂಗಾಂಗಿನಲ್ಲಿ ಮೂರು ಹೈಸ್ಕೂಲುಗಳು ಸುಡಲ್ಪಟ್ಟವು.

ಬೊಂಬಾಯಿನ ಒಂದು ಚೈನಾ ಹೋಟಲಿನ ಮೇಲೆ ಯಾರೋ ಬಾಂಬು ಎಸೆದರು. ಅಪಾಯವೇನೂ ಸಂಭವಿಸಲಿಲ್ಲ

ಅಹಮದಾಬಾದಿನಲ್ಲಿ ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು.

ಕರಾಚಿಯಲ್ಲಿರುವ ಅಮೇರಿಕಾ ಅಧಿಕಾರಿಗಳು, ಕ್ರಿಸ್‌ಮಸ್ಸನ್ನು ಆಚರಿಸಿ, ಪೋಲಿಷ್ ನಿರಾಶ್ರಿತ ಮಕ್ಕಳಿಗೂ ಹಿಂದೂಸ್ಥಾನದ ಮಕ್ಕಳಿಗೂ ಬಟ್ಟೆಗಳನ್ನು ಹಂಚಿದ್ದಾರೆ.

ಪಾತಾಳತರಂಗ

ಜಪಾನಿನವರು ವಿಶೇಷವಾಗಿ ಯುದ್ಧ ಸನ್ನಿಧಾನವನ್ನು ಬರ್ಮಾದಲ್ಲಿ ಮಾಡಿಕೊಳ್ಳುತ್ತಿರುವರು, ವಿಮಾನನಿಲ್ದಾಣವನ್ನು ಒಲಪಡಿಸಿಕೊಳ್ಳುತ್ತಿರುವರು.

ಈಗ ಕಲ್ಕತ್ತಾದಲ್ಲಿ ನಡೆಯುವ ಆಲ್ ಇಂಡಿಯಾ ಸೈನ್ಸ್ ಕಾಂಗ್ರೆಸ್ಸಿಗೆ ಪಂಡಿತ ಜವಹರಲಾಲ್ ನೆಹ್ರೂರವರು ಪ್ರೆಸಿಡೆಂಟರಾಗಿ ಜುನಾಯಿತರಾಗಿದ್ದರು. ಇವರ ಅಡ್ರೆಸ್ಸನ್ನು ಓದಲು ಸರಕಾರದವರು ಅಪ್ಪಣೆ ಕೊಡಲಿಲ್ಲ.

ಲಂಡನ್ನಿನಲ್ಲಿ ಇನ್ನು ಮುಂದೆ ರೈಲ್ವೆ ಗಾಡಿಗಳಿಗೆಲ್ಲಾ ಕಪ್ಪು ಬಣ್ಣ ಬಳಿಯುವರು. ಶತ್ರುಗಳಿಗೆ ರಾತ್ರಿ ವೇಳೆ ಗೊತ್ತಾಗದಿರಲೆಂದು,

ಇಂಡಿಯಾದಲ್ಲಿ ವರ್ತಮಾನಪತ್ರಿಕೆಗಳಿಗೆ ಈಗ ಬಹಳ ಕಷ್ಟಕಾಲ. ಆರು ತಿಂಗಳಿಗೆ ಕೊಡುತ್ತೇವೆಂದು ಹೇಳಿದ 9400 ಟನ್ ಕಾಗದಕ್ಕೆ ಒಂದು ಸಾವಿರ ಟನ್ ಕಾಗದ ಮಾತ್ರ ಇಂಡಿಯಾಕ್ಕೆ ಬಂದಿದೆಯಂತೆ.

ಚಿದಂಬರದಲ್ಲಿ ಐದು ಮಂದಿ ವರ್ತಕರು ತಮ್ಮ ಅಂಗಡಿ ಮುಂದೆ ತಮ್ಮಲ್ಲಿರುವ ಸಕ್ಕರೆ ಸ್ಟಾಕ್ ಮತ್ತು ಖರೀದಿ ವಿಷಯದ ಬೋರ್ಡನ್ನು ಹಾಕದಿದ್ದುದಕ್ಕಾಗಿ ತಲಾ ರೂ. ಐದು ಜುಲ್ಮಾನೆ ವಿಧಿಸಲಾಯಿತು. ಮತ್ತೊಬ್ಬ ಸಕರೆಯನ್ನು ಹೆಚ್ಚು ಖರೀದಿಗೆ ಮಾಡಿದ್ದಕ್ಕಾಗಿ ರೂ. 40 ಜುಲ್ಮಾನೆ ವಿಧಿಸಲಾಯಿತು.

"ಪ್ಯಾರಿಸ್ ಪತನ" ಪುಸ್ತಕಕ್ಕೆ ಮೊದಲು ಬೆಂಬಿಯಿತು

ಇಂಗ್ಲೆಂಡಿನಲ್ಲಿ ಒಬ್ಬ ರಷ್ಯನನು "ಪ್ಯಾರಿಸ್ ಪತನ" ಎಂಬ ಪುಸ್ತಕವನ್ನು ಪ್ರಕಟಿಸಿದನು. ಮಧ್ಯಾಹ್ನದೊಳಗಾಗಿ ಪುಸ್ತಕವೆಲ್ಲವೂ ಯಾವ ಅಂಗಡಿಯಲ್ಲೂ ಸಿಗಲಿಲ್ಲ, ಈ ಪುಸ್ತಕವು ರಷ್ಯಾ ಭಾಷೆಯಲ್ಲಿ ಬರೆದ್ದದ್ದಕ್ಕೆ "ಸ್ಟಾಲಿನ್ ಮೆಡಲು" ಬಹುಮಾನ ಬಂದಿರುತ್ತೆ. ರಷ್ಯಾ ಭಾಷೆಯ ಪುಸ್ತಕವು ಬರೆದು ಕೆಲವು ತಿಂಗಳಾದಾಗ್ಯೂ ಇಂಗ್ಲೆಂಡಿನಲ್ಲಿ ಕೊಂಡಿದ್ದು ಸ್ವಲ್ಪ ದಿವಸದ ಹಿಂದೆ.

ಹಿಂದುಸ್ಥಾನದ ವಿಷಯದಲ್ಲಿ ಸಂಭಾಷಣೆ

ಅಮೇರಿಕಾದ ನಿಗ್ರೋ ಜನರ ಮುಖ್ಯಸ್ಥನು ಲಾರ್ಡ್ ಹಾಲಿ ಫಾಕ್ಸ್‌ಗೆ ಕಾಗದ ಒರೆದು ಯುದ್ಧ ಮುಗಿದನಂತರ ಹಿಂದುಸ್ಥಾನದ ವಿಷಯದಲ್ಲಿ ನಿಮ್ಮ ಆಶಯವೇನು? ಎಂದು ಒರೆಯಲು ಲಾರ್ಡರು ಕಾಗದ ಬರೆಯದೆ ಆತನನ್ನು ಖುದ್ದಾಗಿ ನೋಡಿದರಂತೆ. ಸಂಭಾಷಣೆ ಏನು ಎಂಬುದು ಇನ್ನೂ ಹೊರಬಿಟ್ಟಿಲ್ಲ.

ಇಟಲಿಯ ಜನರ ಗಡಿಬಿಡಿ!

ಇಟಲಿಯವರ ಕಷ್ಟ ಹೇಳತೀರದು. ಪ್ರತಿದಿವಸವೂ ನಿತ್ಯಪಕ್ಷದವರು ಟೂರಿನ್, ನೇಪಲ್ಸ್ ಮುಂತಾದ ಇಟಲಿ ಪಟ್ಟಣಗಳ ಮೇಲೆ ಬಾಂಬ್ ಸುರಿಮಳೆ ಮಾಡುವರು. ಆ ನಗರಗಳ ಜನರು ದಿಕ್ಕಾಪಾಲಾಗಿ, ಕಾಡುಗಳಿಗೂ ಹಳ್ಳಿಗಳಿಗೂ ಓಡುತ್ತಿರುವರು. ಇಟಲಿಯರು ಅಬಿಸೀನಿಯಾದಲ್ಲಿ ವಿಷ ಪ್ರಯೋಗಿಸಿದರು. ಬಾಂಬು ಗೊತ್ತುಗುರಿಯಿಲ್ಲದೆ ಹಾಕಿ ಸಾವಿರಾರು ಪ್ರಜೆಗಳನ್ನು ಕೊಂದರು. ರಷ್ಯಾದಲ್ಲಿದ್ದ ತಮ್ಮ ಏಮಾಸಗಸ್ತೆಲ್ಲಾ ಇಟಲಿಗೆ ತಲಿದಿರುತ್ತಾರೆ. ಮಾಡಿದುಣ್ಣೋ ಮಹಾರಾಯ ಎಂಬ ಗಾದೆಯಂತಾಗಿದೆ.

ಅಪೆರಾ — ರಾಧಿಕ

ವರ್ತಮಾನ ಸಂಗ್ರಹ

1812ರಲ್ಲಿ ನೆಪೋಲಿಯನ್ನನು ರಷ್ಯಾ ಮೇಲೆ ದಂಡೆಯಾತ್ರೆ ನಡೆಸಿ ಮಾಸ್ಕೋ ನಗರದ ಸಮೀಪಕ್ಕೆ ಬಂದನು. ರಷ್ಯರು ಮಾಸ್ಕೋ ನಗರವನ್ನು ಸುಟ್ಟರು. ನೆಪೋಲಿಯನ್ ಮಾಸ್ಕೋ ನಗರದಲ್ಲಿ ಐದು ವಾರ ಇದ್ದನು. ರಾಜಿ ಮಾಡಿಕೊಳ್ಳಲು ರಷ್ಯನರು ಒಲ್ಲೆ ಇಲ್ಲ. ಸಾಕುಸಾಕಾಗಿ ನೆಪೋಲಿಯನ್ ಹಿಂತಿರುಗಬೇಕಾಯಿತು. 1813ರಲ್ಲಿ ರಷ್ಯನರು ಪ್ಯಾರಿಸ್ ನಗರದ ಪಕ್ಕಿರ ಸೂಡಿ ಹೋಗಿದ್ದರು.

ಆಂಗ್ಲಾ ದೇಶದ ವಿಶ್ವವಿದ್ಯಾಲಯಗಳಲ್ಲಿ ಪ್ರಖ್ಯಾತವಾದದ್ದು ಆಕ್ಸ್‌ಫರ್ಡ್. ಈ ಹೆಸರಿಗೆ ಅರ್ಥವೇನೆಂದರೆ— ಎತ್ತು ದಾಟಲು ಸಾಧ್ಯವಾದುದು. ಭಾರತ ದೇಶದಲ್ಲಾದರೋ ಆಕ್ಸ್‌ಫರ್ಡ್ ವಿದ್ಯಾಲಯವು ಸ್ಥಾಪನೆಯಾಗುವುದಕ್ಕೆ ಪೂರ್ವದಲ್ಲಿಯೇ ಅನೇಕ ವಿಶ್ವವಿದ್ಯಾಲಯಗಳು ನೆಲೆಗೊಂಡಿದ್ದವು.

ಜನರಲ್ ಡಾಲರ್ಲಾನನ್ನು ಕೊಂದ ಇಪ್ಪತ್ತು ವರ್ಷದ ಫ್ರೆಂಚ್ ಯುವಕನನ್ನು ಶೂಲಕ್ಕೇರಿಸಿದರು. ಇವನ ತಾಯಿ ಇಟ್ಟಲಿಯವಳು.

ಟುನಿಷಿಯಾದಲ್ಲಿ ಒಂದೇ ಪ್ರಕಾರವಾಗಿ ಮಳೆಯು ಸುರಿಯುತ್ತಿದೆ. ಕೆಲಸ ಕಾರ್ಯಗಳಿಗೆ ಅಡಚಣೆಯಾಗಿರುವುದು.

ರಷ್ಯಾಸೇನೆಗಳು ಯುಕರೇನ್ ಪ್ರಾಂತ್ಯವನ್ನು ಸೇರಿದವು.

ಸತ್ಯವಾಣಿ

ಏಳು ನೂರು ವರ್ಷಗಳ ಹಿಂದೆ ರಷ್ಯಾದ ಅಲೆಗ್ಜಾಂಡರ್ ನವೆಸ್ಕಿಯು ಜರ್ಮನಿಯನರಿಗೆ "ಅತಿಥಿಗಳಾಗಿ ಯಾರಾದರೂ ಬರಬಹುದು, ಆದರೆ ಕತ್ತಿ ಹಿಡಿದು ಬಂದವರು ಹಿಂದಕ್ಕೆ ಹೋಗಲಾರರು" ಎಂದು ಹೇಳಿದ್ದನು.

ಸರ್ ಸಿಕಂದರ್

ಪಂಜಾಬಿನ ಮುಖ್ಯ ಮಂತ್ರಿಯಾದ ಸರ್ ಸಿಕಂದರ್ ಹಯಾತ್ ಖಾರ್ತರವರು ಶನಿವಾರ ರಾತ್ರಿ ಸುಮಾರು 11 ಗಂಟೆ ಸಮಯದಲ್ಲಿ ಲಾಹೋರಿನಲ್ಲಿ ಕಾಲವಾದರು. ಸರ್ ಸಿಕಂದರವರು ಆ ರಾತ್ರೆ ಒಂಭತ್ತೂವರೆ ಗಂಟೆಯಲ್ಲಿ ತಮ್ಮ ಮಗನ ವಿಷಯದಲ್ಲಿ ಮಾತನಾಡುತ್ತಿದ್ದು, ಎದೆಯಲ್ಲಿ ಏನೋ ನೋವಾಗುತ್ತದೆ ಎಂದು ಮಲಗಿಕೊಂಡರು. ಹನ್ನೊಂದು ಗಂಟೆಯಲ್ಲಿ ಯಾತನೆ ಹೆಚ್ಚಾಗಿ, ಡಾಕ್ಟರು ಒಬ್ಬರೊಳಗಾಗಿ ಪ್ರಾಣ ಬಿಟ್ಟರು. ಸೀ ಮುಹ್ಯಾಹ್ನ ನೂರು ಗಂಟೆಯಲ್ಲಿ ಲಾಹೋರಿನಲ್ಲಿ ಅಂತ್ಯಕ್ರಿಯೆ ನಡೆಯಿತು. ಗೌರ್ನರೇ ಆದಿಯಾಗಿ ಅಲ್ಲಿನ ಮಾನ್ಯ ಪ್ರಜೆಗಳು ಹಾಜರಿದ್ದರು. ಮಿ || ಚರ್ಚಿಲ್ಲರೂ, ವೈಸರಾಯರೂ ಲೇಡಿ ಸಿಕಂದರಿಗೆ ಸಂತಾಪವನ್ನು ಸೂಚಿಸಿರುತ್ತಾರೆ.

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ
ಮಂದಿರಗಳಲ್ಲಿ ಎಮರುನೋಡಿ
— ಹೆಚ್ ಆರ್. ಜಿ. ಸಿ. ಯವರ —
ಶ್ರೀ ಪಿಕ್ಚರ್ಸ್
ಗಾಂಧಿಸ್ಪೆಷಲ್, ಮೈಸೂರು ಇವರ
ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚಾಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ
ವಾಣಿ or (VIOLINIST)
ಎಂಬ ಕನ್ನಡ ಸಾಮಾಜಿಕ ಚಿತ್ರ.
— ಸ್ಟೂಡಿಯೊ —
ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್,
ಕೊಯಂಬತ್ತೂರು.

Edited, Printed & published by M. S. Krishna Rao, at the Satyavadi Press, Chamaraja Agrahar, Mysore.